**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.235/2023**

ಪಿ.ಡಬ್ಲ್ಯೂ: 4

ಸಿ.ಡಬ್ಲ್ಯೂ: 4

ಸಾಕ್ಷಿದಾರರ ಹೆಸರು : ಆಕಾಶ್

ತಂದೆಯ ಹೆಸರು: : ರಂಗನಾಥ್

ವಯಸ್ಸು : **30 ವರ್ಷ**

ಉದ್ಯೋಗ : ವ್ಯಾಪಾರ

ವಾಸಸ್ಥಳ : ಲಕ್ಕವಳ್ಳಿ

**ದಿನಾಂಕ: 03-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು 2-3 ವರ್ಷಗಳ ಹಿಂದೆ ನಾನು ಲಕ್ಕವಳ್ಳಿಯ ಪೊಲೀಸ್ ಠಾಣೆಯ ಮುಂದೆ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಒಂದು ಬಸ್ಸನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **10-07-2022** ರಂದು ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಬೆಳಿಗ್ಗೆ **11-00** ರಿಂದ **11-45** ಗಂಟೆಯವರೆಗೆ ಅಪಘಾತ ಮಾಡಿದ ಕೆಎ **17** ಎಫ್ **1336** ಕೆ ಎಸ್ ಆರ್ ಟಿ ಸಿ

ಬಸ್ಸನ್ನು ಪೊಲೀಸರು ಅಮಾನತ್ತು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸದರಿ ಮಹಜರ್ ಗೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ನನ್ನ ಸಮಕ್ಷಮ ಪೊಲೀಸರು ಯಾವುದೇ ಬರವಣಿಗೆ ಮಾಡಿರುವುದಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ಸಾರ್ವಜನಿಕರ ಸಹಿ ಬೇಕು ಎಂದಿದ್ದಕ್ಕೆ ಸಹಿ ಮಾಡಿರುತ್ತೆನೆ, ಯಾವುದೇ ವಿಚಾರ ತಿಳಿದಿರುವುದಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**